ಹುಬ್ಬಳ್ಳಿ ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್
HUBBALLI DHARWAD SMART CITY LIMITED
Special Purpose Vehicle for Implimentation of Smart City Project
(Registered Company No. CIN : U74999KA2017 PLC 101265)

ನಂ:ಎಚ್‌ಡಿಎಸ್‌ಸಿಎಲ್/ಪತ್ರಿಕಾಮಾಹಿತಿ/2019-20 ದಿ: 07-02-2020

## ಪತ್ರಿಕಾ ಮಾಹಿತಿ

**ವಿಷಯ :** ನಗರ ಪ್ರದೇಶದ ನಾಗರೀಕ ಸೌಲಭ್ಯ ಹಾಗೂ ನಗರ ಪ್ರದೇಶದ ಸೌಲಭ್ಯಗಳ ಕುರಿತು ಸಮೀಕ್ಷಣೆಯ ಅಭಿಯಾನ ಮಾಡಿದ ಕುರಿತು ವರದಿ.

* * * * *

ಕೇಂದ್ರ ನಗರಾಭಿವೃದ್ಧಿ ಮಂತ್ರಾಲಯದಿಂದ ನಗರ ಪ್ರದೇಶದಲ್ಲಿ ವಾಸಿಸುವ ಜನರಿಗೆ ನಾಗರೀಕ ಸೌಲಭ್ಯಗಳು ಹಾಗೂ ನಗರ ಪ್ರದೇಶದಲ್ಲಿ ಜೀವನದ ಕ್ಷಮತೆಯ ಕುರಿತು ದಿ: 01-02-2020 ರಿಂದ 29-02-2020 ರ ವರೆಗೆ ನಾಗರೀಕರ ಸಮೀಕ್ಷಣಾ ಅಭಿಯಾನವನ್ನು ಪ್ರಾರಂಬಿಸಿದೆ. ಸದರಿ ಸಮೀಕ್ಷಣೆಯ ಆಬಿಯಾನದಲ್ಲಿ ಅವಳಿನಗರದ ನಾಗರೀಕರು ತಮ್ಮ ನಗರ ಜೀನವನದ ವಾಸಿಸುವ ಮಟ್ಟದಲ್ಲಿ ದೊರಕುವ ಸೌಲಭ್ಯಗಳ ಕುರಿತು ಮತ್ತು ನಗರ ಜೀವನದ ಕ್ಷಮತೆಯ ಕುರಿತು ಸೂಕ್ತ ಅಂಕಗಳನ್ನು ನೀಡಿ ಹುಬ್ಬಳ್ಳಿ-ಧಾರವಾಡ ನಗರ ಪ್ರದೇಶವನ್ನು ವರ್ಗೀಕರಿಸಬಹುದಾಗಿದೆ. ಈ ದಿಶೆಯಲ್ಲಿ ನಾಗರೀಕರು ತಮ್ಮ ಅಭಿಪ್ರಾಯಗಳನ್ನು **Eol2019.org/citizenfeedback** ಲಿಂಕಿನಲ್ಲಿ ದಾಖಲಿಸಲು ಕೋರಿ ಈಗಾಗಲೇ ಅವಳಿನಗರದ ವ್ಯಾಪ್ತಿಯಲ್ಲಿ ಪ್ರಮುಖ ಸ್ಥಳಗಳಲ್ಲಿ ಪ್ರಸಿದ್ದಿಪಡಿಸಲಾಗಿದೆ. ಪ್ರಸ್ತುತ ನಾಗರೀಕ ಸೌಲಭ್ಯಗಳ ಕುರಿತು ಅಭಿಯಾನದಲ್ಲಿ ಎಕ್ಸಿಸ್ ಬ್ಯಾಂಕಿನ ಅಧಿಕಾರಿ/ಸಿಬ್ಬಂದಿಗಳು ಮತ್ತು ಐಬಿಎಮ್‌ಆರ್ (IBMR) ಕಾಲೇಜ್, ಅಕ್ಷಯ ಕಾಲೋನಿ ವಿದ್ಯಾನಗರ ಹುಬ್ಬಳ್ಳಿಯಲ್ಲಿ ವಿಶೇಷ ಅಬಿಯಾನವನ್ನು ಮಾಡಿ ಎಮ್.ಬಿ.ಎ ವಿದ್ಯಾರ್ಥಿಗಳಿಂದ ನಾಗರೀಕ ಅಭಿಪ್ರಾಯಗಳನ್ನು ಆನ್‌ಲೈನ್ ಪೋರ್ಟಲ್‌ನಲ್ಲಿ ದಾಖಲಿಸಲಾಯಿತು.

ಸದರಿ ಕಾರ್ಯಚಟುವಟಿಕೆಯಲ್ಲಿ ಫೋಟೋ ಹಾಗೂ ವರದಿಯನ್ನು ಈ ವರದಿಯೊಂದಿಗೆ ಲಗತ್ತಿಸಲಾಗಿದೆ. ಇಲ್ಲಿಯವರೆಗೆ ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಸಂಸ್ಥೆಯಿಂದ 1350 ನಾಗರೀಕರು ತಮ್ಮ ಅಭಿಪ್ರಾಯಗಳನ್ನು ನಾಗರೀಕ ಅಭಿಯಾನದ ಅಡಿಯಲ್ಲಿ ಆನ್‌ಲೈನ್ ಮೂಲಕ ದಾಖಲಿಸಿರುವರು. ಸದರಿ ಅಭಿಯಾನದಲ್ಲಿ ಐಬಿಎಮ್‌ಆರ್ ಗ್ರೂಪ್ ಆಫ್ ಕಾಲೇಜ್‌ನ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ. ರಿಯಾಜ ಬಸರಿ, ಸಂಸ್ಥೆಯ ಬೋಧಕ ಸಿಬ್ಬಂದಿ ಹಾಗೂ ಸ್ಮಾರ್ಟಸಿಟಿ ಸಂಸ್ಥೆಯ ವಿಶೇಷ ಅಧಿಕಾರಿಗಳಾದ ಶ್ರೀ. ಎಸ್. ಎಚ್. ನರೇಗಲ್ ಇವರು ಭಾಗವಹಿಸಿದ್ದರು.

(ಎಸ್. ಎಚ್. ನರೇಗಲ್)
ವಿಶೇಷ ಅಧಿಕಾರಿಗಳು
ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್,
ಹುಬ್ಬಳ್ಳಿ

**ದೂರವಾಣಿ ಸಂಖ್ಯೆ : 2355322, ಫ್ಯಾಕ್ಸ್ ಸಂಖ್ಯೆ : 2355331 ಇ-ಮೇಲ್ :**
**ಅಭಿನಂದನೆಗಳೊಂದಿಗೆ ಮಾಹಿತಿಗಾಗಿ ಹಾಗೂ ಪ್ರಕಟಣೆಯ ಕೃಪೆಗಾಗಿ :**

1. ಮಾನ್ಯ ಸಂಪಾದಕರು ಸ್ಥಳೀಯ ಎಲ್ಲ ದಿನಪತ್ರಿಕೆಗಳು
2. ಹಿರಿಯ ಸಹಾಯಕ ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಮಿನಿ ವಿಧಾನಸೌಧ, ಹುಬ್ಬಳ್ಳಿ
3. ವರದಿಗಾರರು ಎಲ್ಲ ಸ್ಥಳೀಯ ವಿದ್ಯುನ್ಮಾನ ಪ್ರಸಾರ ಮಾದ್ಯಮಗಳು
4. ನಿಲಯ ನಿರ್ದೇಶಕರು ಆಕಾಶವಾಣಿ ಕೇಂದ್ರ ಧಾರವಾಡ
5. ನಿರ್ದೇಶಕರು ಕೆ.ಎಲ್.ಇ. ಧ್ವನಿ ಬಿ.ವ್ಹಿ.ಬಿ. ಕಾಲೇಜು ಆವರಣ ವಿದ್ಯಾನಗರ, ಹುಬ್ಬಳ್ಳಿ

ನೊಂದಾಯಿತ ಕಚೇರಿ : 4ನೇ ಮಹಡಿ, 'ಎಫ್' ಬ್ಲಾಕ್, ಐಟಿ ಪಾರ್ಕ, ಹುಬ್ಬಳ್ಳಿ ಕರ್ನಾಟಕ ರಾಜ್ಯ ಭಾರತ.
Regd Office : 4th Floor, 'F' Block, IT Park, HUBBALLI - 580 020, Karnataka State, India.
Ph : 0836-2355322, Fax : 0836-2355331, Control Room Assistance : 2213888/2213898,
Website : wwwhubballidharwadsmartcity.com E-mail : smartcityhubballidharwad@gmail.com